ತೆರೆದಿದ್ದ ಹೊಳೆಬಾಗಿಲಿನಿಂದ ಅಜ್ಜಿಯೊಂದು ಏನನ್ನೋ ಕೇರುತ್ತಾ ಕುಳಿತಿತ್ತು. ಇಡೀ ವಾತಾವರಣ ಕುಂಟುಸಿರುಯ್ಯುತ್ತಿತ್ತು.

ಕಾರಿನ ಬಳಿಯೇ ಇರುವಂತೆ ಕೋಯಾನಿಗೆ ಕೈ ಸನ್ನೆ ಮಾಡಿ ಹೊರಟ ಮನವಾಳನ್‌ಗೆ ಅಲ್ಲಿನ ಆ ಒಂದೊಂದು ಮನೆಯಲ್ಲೂ ವಾಸಿಸುತ್ತಿದ್ದ ತನ್ನ ಸಹೋದ್ಯೋಗಿಗಳು, ಗೆಳೆಯರು ಕಣ್ಮುಂದೆ ಬರುತ್ತಾ ಎದೆ ಭಾರವಾಗತೊಡಗಿತು. ಅವುಗಳನ್ನು ತಟಾಯ್ದು ಉತ್ತರಕ್ಕೆ ಹರಿದಿದ್ದ ಕಚ್ಚಾ ರಸ್ತೆಗಿಳಿದ. ಅಲ್ಲಿ ಅನತಿ ದೂರದಲ್ಲಿ ಆ ಕಾಲಕ್ಕೆ ಅಲ್ಲಿನ ಮನೆಗಳಿಗೆಲ್ಲಾ ಇದ್ದ ಏಕೈಕ ಅಂಗಡಿ ಕಿಟಕಿ ಬಾಗಿಲುಗಳಿಲ್ಲದೆ ಸೊಂಟ ಮುರಿದುಕೊಂಡಂತೆ ಕೂತಿತ್ತು. ಅದರ ಪಕ್ಕದಲ್ಲಿ ವಾರಕ್ಕೊಮ್ಮೆ ಸಿನೇಮಾ ತೋರಿಸುತ್ತಿದ್ದ ಪ್ರೊಜೆಕ್ಟರ್ ರೂಮೂ ಅದಕ್ಕಿಂತ ಅತತಾ ಸ್ಥಿತಿಯಲ್ಲಿತ್ತು. ಮನವಾಳನ್‌ಗೆ ಕಾಲುಗಳು ಭಾರವೆನಿಸಿ ಜಗ್ಗತೊಡಗಿದವು. ಅಲ್ಲಿಂದ ಬಲಕ್ಕೆ ಹೊರಳಿದ. ಅತ್ತ ಕಡೆ ಅಧಿಕಾರಿಗಳ ಮನೆಗಳಿದ್ದ ಸಲುವಾಗಿ ಆ ರಸ್ತೆ ಟಾರು ಬಳುಕಂಡಿತ್ತು. ರಸ್ತೆಯ ಎಡಕ್ಕೆ ಬೇರೆ ರಾಜ್ಯಗಳಿಂದ, ವಿದೇಶಗಳಿಂದ ಬರುತ್ತಿದ್ದ ಅಧಿಕಾರಿಗಳು ತಂಗುವ ಸಲುವಾಗಿ ಇದ್ದ ಪ್ರವಾಸಿ ಮಂದಿರದ ಮುಖ್ಯ ಬಾಗಿಲು ಬೀಗ ಜಡುಕೊಂಡಿತ್ತು. ಬಲಕ್ಕೆ ಒಂದು ಕಾಲದಲ್ಲಿ ಸ್ಕೂಲಾಗಿದ್ದ ಕಟ್ಟಡ ಆಸ್ಪತ್ರೆಯ ಬೋರ್ಡು ನೇತಾಕಿಕೊಂಡಿತ್ತು. ಕೆಲ ಕಾಲ ಅದನ್ನೇ ದಿಟ್ಟಿಸುತ್ತಾ ನಿಂತ ಮನವಾಳನ್‌ಗೆ ಮಕ್ಕಳಾದ ಪೆರುಮಾಳ್, ಸೆಂಥಿಲ್ ಆ ಸ್ಕೂಲಿನ ಜಗಲಿಯ ಕಡೆಯಿಂದ ತನ್ನನ್ನು ಕೂಗುತ್ತಾ ಓಡಿ ಬರುತ್ತಿರುವಂತೆ ಭಾಸವಾಗಿ ಕಣ್ಣು ಮಂಜಾದವು.

ಅಲ್ಲಿಂದ ನೇರಕ್ಕೆ ದೂರದ ದಿಬ್ಬದಲ್ಲಿ ಕಾಣುತ್ತಿದ್ದ ಚರ್ಚ್‌ನತ್ತ ಹೋಗುವ ಮನಸಾಯ್ತು ಮನವಾಳನ್‌ಗೆ. ಅಲ್ಲಲ್ಲಿ ಎದ್ದಿದ್ದ ಎಡವುಗಲ್ಲುಗಳ ಕಾಡು ಜಾಡಿಗಿಳಿದ. ಚರ್ಚ್‌ಗೂ ಬೀಗಹಾಕಲಾಗಿತ್ತು. ಬದುಕಿರುವಷ್ಟೂ ದಿನ ಊರಲ್ಲಿರದಿದ್ದ ದಿನವನ್ನು ಬಿಟ್ಟರೆ, ಒಂದು ಭಾನುವಾರವೂ ಮಿಸ್ ಮಾಡದೆ ಚರ್ಚಿಗೆ ಹೋಗುತ್ತಿದ್ದ ಹೆಂಡತಿ ಪೂಂಗೊಡಿ ಚರ್ಚಿನ ಬಾಗಿಲಲ್ಲಿ ನಿಂತಂತೆ ಕಂಡಳು. ಮನವಾಳನ್‌ಗೆ ಎದೆ ಕಟ್ಟಿದಂತಾಯ್ತು. ಚರ್ಚಿನ ಬಲ ಭಾಗಕ್ಕಿದ್ದ ದುಂಡುಗಲ್ಲುಗಳಿಂದ ಕಟ್ಟಿದ್ದ ಮೇರಿಯಮ್ಮನ ಪುಟ್ಟ ಗುಡಿಯ ಹಿಂಬದಿಗೆ ಸೀದಾ ಹೋದವನೇ ಕೂತುಬಿಟ್ಟ. ತುಂಬ್ತುಂಬಿ ಬರುತ್ತಿದ್ದ ಕಂಗಳನ್ನು ಮೆಲ್ಲಗೆ ತೀಡಿಕೊಂಡು ಸುತ್ತಲೂ ಕಣ್ಣಾಡಿಸಿದ.

ಕೂತಲ್ಲಿಂದಲೇ ತನ್ನ ಹೊಲ ಕಾಣಬಹುದಾ ಅಂತ ನೋಡಿದ. ದೂರಕ್ಕೆ ಹೊಲಗಳೆಲ್ಲಾ ಸೊಪ್ಪಿನ ಪುಟ್ಟ ಪುಟ್ಟ ಮಡಿಗಳಂತೆ ಕಾಣುತ್ತಿದ್ದರಿಂದ ಸಾಧ್ಯವಾಗದೆ ನಿಟ್ಟುಸಿರುಬಿಟ್ಟ. ಹೊಲಗಳಾಚೆಗೆ ಇದ್ದ ಸಾಲು ಗುಡ್ಡಗಳ ಮೈಯ್ಯಲ್ಲಿ ಮೈನಿಂಗ್ ಮಾಡಿದ್ದ ಗಾಯಗಳು ಬಿಸಿಲಿಗೆ ಕೆಂಪು ಕಕ್ಕುತ್ತಿದ್ದವು. ಅಲ್ಲಲ್ಲಿ ಹರಿದಿದ್ದ ದಾರಿಗಳು ದಾರಗಳಂತೆಯೂ, ಗಿಡ ಮರಗಳು ಪುಟಾಣಿ ಛತ್ರಿಗಳಂತೆಯೂ ಗೋಚರಿಸುತ್ತಿದ್ದವು. ಅವನು ಕೂತಲ್ಲಿಂದ ಎಡಕ್ಕೆ ಸ್ವಲ್ಪ ದೂರದಲ್ಲಿ ಗುಡ್ಡದ ಬುಡದಲ್ಲೊಂದು ದೇವಸ್ಥಾನವಿತ್ತು. ಅದನ್ನು ತಟಾಯ್ದು ಹಳ್ಳಿಯೊಂದಿತ್ತು. ಬಲಕ್ಕೆ ಇಳಿಜಾರು ಕಳೆದು ಸಮತಟ್ಟಾಗಿದ್ದ ಜಾಗದಲ್ಲಿ ಮರಗಳ ಗುಂಪಿನ ನಡುವೆ ಅವುಗಳ ಒಡನಾಡಿಗಳಂತಿದ್ದ ಕ್ವಾಟರ್ಸ್‌ನ ಮನೆಗಳಿದ್ದವು. ಆದರವತ್ತು ಅವು ಮನವಾಳನ್‌ಗೆ ಆಗಿನಂತೆ ಚಂದ ಕಾಣದೆ ಹಲವು ಸಮಾಧಿಗಳಿಂದಾದ ದೊಡ್ಡದೊಂದು ಸಮಾಧಿಯಂತೆ ಭಾಸವಾಗಿ ಒಮ್ಮೆಗೇ ಬೆಚ್ಚಿದ. ನೆನಪುಗಳ ವಜನ್ನಿಗೆ ಮನವಾಳನ್ ಕುಸಿಯತೊಡಗಿದ. ಇನ್ನಿಲ್ಲಿ ಕೂರುವುದು ಆಗದ ಮಾತು ಅನಿಸುತ್ತಲೇ ಇನ್ನೇನು ಎದ್ದು ಹೊರಡಬೇಕು ಅನ್ನುವಷ್ಟರಲ್ಲಿ ಮನವಾಳನ್‌ನ ಮೊಬೈಲ್ ಗಣಗುಟ್ಟಿತು. 'ಅಂಕಲ್ ಎಲ್ಲಿದೀರ ನಾನು ಗುರ್‍ಸಿದ್ಧ' ಅತ್ತಲಿನ ದನಿ ಮಾತಾಡಿತು. ಇತ್ತ ಮನವಾಳನ್ ಕರೆಯನ್ನು ಕಟ್ ಮಾಡಿ ಫೋನ್ ಸ್ವಿಚಾಫ್ ಮಾಡಿದ.

ಗುರ್‍ಸಿದ್ಧ ಮನವಾಳನ್‌ಗೆ ಸಹೋದ್ಯೋಗಿಯಾಗಿದ್ದ ದೊಡ್ಡಾಲಪ್ಪನ ಮಗ. ನಿವೃತ್ತಿಯಾಗಿ